# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 525
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 19-02-2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 1984 ರಿಂದ 1987 ರವರೆಗೆ ವಿವಿಧ ವರ್ಷಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪ್ರಾಥಮಿಕ ಶಾಲಾ ಶಿಕ್ಷಕರು/ಉಪನ್ಯಾಸಕರ /ಪ್ರಾಂಶುಪಾಲರು ನೇಮಕಗೊಂಡು ಆದೇಶ ಸಂಖ್ಯೆ: ಇಡಿ 239 ಎಸ್‌ಇಎಸ್ 88 ದಿನಾಂಕ: 20-02-1991 ರಂದು ಇವರ ಸೇವೆಯನ್ನು ಖಾಯಂಗೊಳಿಸಿ ರಜೆ ಮತ್ತು ಪಿಂಚಣಿ ಸೌಲಭ್ಯ ನೀಡಲು ಆದೇಶಿಸಿರುವುದು ನಿಜವೇ; | ಹೌದು |
| ಆ) | ಈ ಅವಧಿಯಲ್ಲಿ ಖಾಯಂಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರ ಉಪನ್ಯಾಸಕರ ಪ್ರಾಂಶುಪಾಲರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಖಾಯಂಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ:3110 ಮತ್ತು ಉಪನ್ಯಾಸಕರು/ಪ್ರಾಂಶುಪಾಲರ ಸಂಖ್ಯೆ:725<br>(ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ) |
| ಇ) | ಇವುಗಳಲ್ಲಿ ಎಷ್ಟು ಜನ ಶಿಕ್ಷಕರು ಉಪನ್ಯಾಸಕರು ಪ್ರಾಂಶುಪಾಲರು ಸೇವೆಯಲ್ಲಿದ್ದಾರೆ: ಹಾಗೂ ನಿವೃತ್ತರಾದವರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಸೇವೆಯಲ್ಲಿರುವ ಶಿಕ್ಷಕರ ಸಂಖ್ಯೆ:255.<br>ನಿವೃತ್ತರಾದ ಶಿಕ್ಷಕರ ಸಂಖ್ಯೆ:2855.<br>ಎಲ್ಲಾ 725 ಉಪನ್ಯಾಸಕರು/ ಪ್ರಾಂಶುಪಾಲರುಗಳು ಸೇವೆಯಿಂದ ನಿವೃತ್ತಿ/ನಿಧನ ಹೊಂದಿರುತ್ತಾರೆ.<br>(ವಿವರವನ್ನು ಅನುಬಂಧದಲ್ಲಿ ಒದಗಿಸಿದೆ) |
| ಈ) | ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013 (ಭಾಗ-2) ದಿನಾಂಕ:29-11-2021 ರ ಪ್ರಕಾರ ಗುತ್ತಿಗೆ ಮೇಲೆ ನೇಮಕಗೊಂಡ ನೌಕರರ ವೇತನವನ್ನು ಖಾಯಂಗೊಂಡ ದಿನಾಂಕದಿಂದ ಪುನರ್ ನಿಗದಿಪಡಿಸಲು ಆದೇಶಿರುವುದು ನಿಜವೇ; ಆದೇಶಿದ್ದಲ್ಲಿ ಕಾರಣಗಳೇನು; ಯಾವ ಉದ್ದೇಶಕ್ಕೆ ಈ ರೀತಿ ಆದೇಶಿಸಲಾಗಿದೆ; | 1984 ರಿಂದ 1991 ರ ಅವಧಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರ/ಉಪನ್ಯಾಸಕರ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ (ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರ/ಉಪನ್ಯಾಸಕರ ಸೇವಾ ವಿಲೀನ) (ವಿಶೇಷ) ನಿಯಮಗಳು, 1990 (ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 239 ಎಸ್‌ಇಎಸ್ 1988 ದಿನಾಂಕ:19/02/1991) ರನ್ವಯ ಸಕ್ರಮಗೊಳಿಸಲಾಗಿದೆ. ಸದರಿ ನಿಯಮಗಳ ನಿಯಮ 4(1) ರಂತೆ ಈ ಉಪನ್ಯಾಸಕರುಗಳಿಗೆ ನೇಮಕಾತಿ ಹೊಂದಿದ ದಿನಾಂಕದಿಂದ ಕಾಲ್ಪನಿಕವಾಗಿ ವೇತನ |

| | | |
|---|---|---|
| ಉ) | ಈ ರೀತಿಯ ವೇತನವನ್ನು ಪುನರ್ ನಿಗದಿಪಡಿಸಲು ಆದೇಶ ಜಾರಿಗೆ ತಂದರೆ ಸುಮಾರು 34 ರಿಂದ 38 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಆರ್ಥಿಕವಾಗಿ ತೀವ್ರ ತೊಂದರೆಯಾಗುವುದಿಲ್ಲವೇ; | ನಿಗದಿಗೊಳಿಸಲಾಗಿತ್ತು.<br><br>ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 12 ಎಸ್ಆರ್ಇ 1997 ದಿನಾಂಕ:08–10–1999ರಲ್ಲಿ 1990ರ ವಿಶೇಷ ನಿಯಮಗಳ ನಿಯಮ–4(1)ಕ್ಕೆ ತಿದ್ದುಪಡಿ ತರಲಾಗಿದೆ. ಅದರನ್ವಯ ಸೇವಾ ವಿಲೀನಗೊಳಿಸಿದ ದಿನಾಂಕದಂದು ಅವರುಗಳ ವೇತನವನ್ನು ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ ನಿಗದಿಪಡಿಸಬೇಕಾಗುತ್ತದೆ. ಸದರಿ ತಿದ್ದುಪಡಿ ನಿಯಮ ಜಾರಿಗೆ ಬರುವ ಪೂರ್ವದಲ್ಲಿ ವಿಶೇಷ ನಿಯಮಗಳ ನಿಯಮ 4(1) ರನ್ವಯ ವೇತನ ನಿಗದಿಪಡಿಸಲಾಗಿದ್ದ ಪ್ರಕರಣಗಳಲ್ಲಿ ಅಂತಹ ಉಪನ್ಯಾಸಕರುಗಳಿಗೆ ಕಾಲ್ಪನಿಕವಾಗಿ ಎಷ್ಟು ವಾರ್ಷಿಕ ವೇತನ ಬಡ್ತಿಗಳನ್ನು ನೀಡಿ ವೇತನ ನಿಗದಿಗೊಳಿಸಲಾಗಿದೆಯೋ, ಅವರ ಅಷ್ಟೂ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯಲು ಅವರುಗಳು ಅರ್ಹರಾಗುವುದಿಲ್ಲ.<br><br>ಇದೇ ರೀತಿ ಶ್ರೀ ಬಿ.ಸಿ.ಪರಮೇಶ್ವರಪ್ಪ ಮತ್ತಿತರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:3749/94 c/w 3930–3944/94, 206/95 ಮತ್ತು 207 & 208/95ರಲ್ಲಿ ಅರ್ಜಿ ಸಲ್ಲಿಸಿ, ನಿಯಮಾನುಸಾರ ನೇಮಕಾತಿಯಾಗುವ ಪೂರ್ವದಲ್ಲಿ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿರವುದನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ–41 (ಎ)ರಡಿಯಲ್ಲಿ ಪರಿಗಣಿಸಿ ಸೇವಾ ಸೌಲಭ್ಯವನ್ನು ವಿಸ್ತರಿಸುವಂತೆ ಕೋರಿದ್ದು, ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ:14–06–1996ರ ಆದೇಶದಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿದೆ.:–<br>*"4. I do not think so. The principle behind Rule 4(2) of Rules of the absorption Rules is the same as Rule 41 of the KCSR's. This Tribunal has held that those persons who were working on contract basis are also to be treated as local candidate vide 1994 K.S.L.J. 195 (PUTTAPPA AND OTHERS V. KPSC and Others). It was a case of contract teachers appointed as Secondary School Assistants. A Bench of this Tribunal held that as per sub-Rule 27(a) of Rule 8 of the KCSRs which defines the term "Local Candidate" in service means a temporary Government servant not appointed regularly as per rules of recruitment to that service, shall have to be considered as a Local Candidate. The same view was expressed by another Bench in* |
| ಊ) | ಹಾಗಾದ್ದಲ್ಲಿ ವೇತನ ಪುನರ್ ನಿಗದಿಪಡಿಸಲು ಆದೇಶಿರುವ ಆದೇಶವನ್ನು ಹಿಂದಕ್ಕೆ ಪಡೆಯುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು? (ವಿವರ ನೀಡುವುದು) | |

*Applications No 7329-7331/1986 (SEETHA AND OTHERS V. STATE AND OTHERS) and connected cases decided on 09-03-1988. Having regard to the peculiar nature of the service conditions of a contract teachers, naturally, it was held that they shall have to be considered as Local Candidates for certain purpose. There is no reason for me to take a different view. In fact, I am bound by the said decisions. If the Applicants are considered as Local Candidates till they were regularly appointed, they are certainly entitled to the benefit of Rule 41-A of the KCSR's which provides for the fixation of pay at a particular stage having regard to the earlier service. Applicants have been denied the benefit of Rule 41-A.*

*5. In the circumstances, I direct the Respondents to extend the benefit of Rule 41-A to the Applicants and re-fix the pay and increments of the Applicants accordingly. Applicants will be entitled to the arrears based on the re-fixation from the date of the Absorption Rules, namely 19-02-1991."*

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ದಿನಾಂಕ:14–06–1996ರ ತೀರ್ಪನ್ನು ಪ್ರಶ್ನಿಸಿ, ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ:17729–17747/97ನ್ನು ದಾಖಲಿಸಿತ್ತು. ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು "on the grounds of limitation" ವಜಾಗೊಳಿಸಿರುತ್ತದೆ. ಆದ್ದರಿಂದ, ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ:14–06–96ರ ಆದೇಶವನ್ನು ಅನುಷ್ಠಾನಗೊಳಿಸದಿರುವುದರಿಂದ ಅರ್ಜಿದಾರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ನಿಂದನಾ ಅರ್ಜಿ ಸಂಖ್ಯೆ:46/97, 47/97 ಮತ್ತು 48/97, 49/97 ಮತ್ತು 50–64/97ಗಳನ್ನು ದಾಖಲಿಸಿದ್ದರು. ಏತನ್ಮಧ್ಯೆ, ಇದೇ ರೀತಿಯ ಇನ್ನೊಂದು ಪ್ರಕರಣದಲ್ಲಿ ಅಂದರೆ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:266 ಮತ್ತು 267/98 C/w 321-435/98 ಶ್ರೀ ಜಿ.ಹಾಲಪ್ಪ ವಿರುದ್ಧ ಕರ್ನಾಟಕ ಸರ್ಕಾರ ಈ ಪ್ರಕರಣದಲ್ಲಿನ ದಿನಾಂಕ:15–01–1998ರ ತೀರ್ಪಿನಲ್ಲಿ ಅರ್ಜಿದಾರರ ಪ್ರಕರಣದ ಕುರಿತಂತೆ ಮೇಲೆ ಹೇಳಲಾದ ಶ್ರೀ ಪರಮೇಶ್ವರಪ್ಪ ಪ್ರಕರಣಕ್ಕೆ ಸಂಬಂಧಿಸಿದ ಅವರ ದಿನಾಂಕ:14–06–1996ರ ಆದೇಶದಂತೆ, ಕ್ರಮ ಕೈಗೊಳ್ಳಲು ಸ್ಪಷ್ಟ ನಿರ್ದೇಶನ ನೀಡಿ, ಆದೇಶಿಸಿತ್ತು.

ಮೇಲೆ ಹೇಳಲಾದ ಮಾನ್ಯ ಕೆ.ಎ.ಟಿ.ಯ ದಿನಾಂಕ:15–01–1998ರ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:10496 & 10497–10612/98ರಲ್ಲಿನ ದಿನಾಂಕ:01–04–1998ರ ತೀರ್ಪಿನಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸರ್ಕಾರದ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಸದರಿ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಸಿವಿಲ್ ಅಪೀಲು ಸಂಖ್ಯೆ:525–641 C/w ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ:6456–6606/2000, ಸಿವಿಲ್ ಅಪೀಲು ಸಂಖ್ಯೆ:3491/2000 ಮತ್ತು ಸಿವಿಲ್ ಅಪೀಲು ಸಂಖ್ಯೆ:3747–3748/2000ರಲ್ಲಿ ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯವು ಸರ್ಕಾರದ ಸದರಿ ಅರ್ಜಿಯನ್ನು ಪುರಸ್ಕರಿಸಿ, ಶ್ರೀ ಹಾಲಪ್ಪ ಪ್ರಕರಣದಲ್ಲಿ ನೀಡಲಾದ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ವಜಾಗೊಳಿಸಿ, ಆದೇಶಿಸಿರುತ್ತದೆ. ದಿನಾಂಕ:26–04–2002ರ ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ–

" *The expression '**local candidate**' and Rule-41A of the Karnataka Civil Services Rules and Note 7 to Rule 41 was however interpreted in a very strained manner by the Tribunal to uphold the contention raised on behalf of the petitioners.*

*Such a situation in the present case will not arise at all because it is not the continuation of the original appointment made which is one a contract basis and contract comes to an end either on the expiry of the term or on a regular candidate reporting to duty particularly when the contract itself makes it clear that the service shall not be counted for any purpose, the claim of the respondents could not have been brought under Rule-41A at all."*

"Local candidates" ಮತ್ತು "Contract Employees" ಇವೆರಡು ವಿಭಿನ್ನ ವರ್ಗಗಳಾಗಿದ್ದು, ಈ ಎರಡು ವರ್ಗಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 41(ಎ)ರ ಸೌಲಭ್ಯವನ್ನು "Contract Employees" ವಿಸ್ತರಿಸುವುದಕ್ಕೋಸ್ಕರ ಸಂಬಂಧಿಸಿದಂತೆ ಹೋಲಿಕೆ ಕಲ್ಪಿಸುವುದು ತಪ್ಪು ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನ ವಿಶ್ಲೇಷಣೆಯಲ್ಲಿ ಸ್ಪಷ್ಟವಾಗಿ ವಿಷದೀಕರಿಸಿದೆ. ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲದಯ ಸದರಿ ತೀರ್ಪಿನಲ್ಲಿನ ಆದೇಶವನ್ನು ಉಲ್ಲೇಖಿಸಿ, ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 59 ಎಸ್‌ಇಡಬ್ಲ್ಯೂ 97 ದಿನಾಂಕ:20–06–2002ರಲ್ಲಿ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಸಲ್ಲಿಸಿದ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 41(ಎ)ರಡಿಯಲ್ಲಿ ಸೌಲಭ್ಯಕ್ಕಾಗಿ ಪರಿಗಣಿಸತಕ್ಕದ್ದಲ್ಲವೆಂದು ಈಗಾಗಲೇ ಸಂಬಂಧಿಸಿದ ಎಲ್ಲರಿಗೂ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ಆದಾಗ್ಯೂ, ಶ್ರೀ ಪರಮೇಶ್ವರಪ್ಪ ಮತ್ತು ಇತರರು, ತಮಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ:14–06–1996ರ ಆದೇಶವು ಅಂತಿಮವಾಗಿರುವುದರಿಂದ, ಸದರಿ ತೀರ್ಪನ್ನು ಅನುಷ್ಠಾನಗೊಳಿಸದಿರುವುದರಿಂದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ನಿಂದನಾ ಅರ್ಜಿ ಸಂಖ್ಯೆ: ಸಂಖ್ಯೆ:46/97, 47/97 ಮತ್ತು 48/97, 49/97 ಮತ್ತು 50–64/97ಗಳನ್ನು ಸಲ್ಲಿಸಿದ್ದರು. ಸದರಿ ನಿಂದನಾ ಅರ್ಜಿಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ:21–12–2006ರಂದು ನೀಡಿರುವ ತೀರ್ಪಿನಲ್ಲಿ, ನಿಂದನಾ ಅರ್ಜಿಯನ್ನು ಕೈಬಿಟ್ಟಿದೆ. ಸದರಿ ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ:–

*"13. No doubt, here is considerable force in the contention of the learned Counsel for the Complainants that adverse orders were passed against their interest without notice and without giving an opportunity of hearing, which is well-founded. But the fact remains that when they came to know that adverse orders have been passed against their interests in some other cases, the remedy opened to the complaints was to have approached the Apex Court for appropriate remedial approached the Apex Court for appropriate remedial orders. The complainants are stated to have not adopted this course, which was very much available to them for all these years. The Tribunal cannot go behind the order/direction of the apex Court in G.Halappa's case, which is impermissible in law.*

*14. Examined in the background of these facts, we are of the view that the present contempt applications are not only untenable but contrary to the directions of the Apex Court. Therefore, the Respondents cannot be held to have committed any violation of the orders of this tribunal much less wilful disobedience. Accordingly, the contempt applications are dismissed as without merits."*

ಈ ಸನ್ನಿವೇಶದಲ್ಲಿ, ಮೇಲೆ ವಿವರಿಸಿದಂತೆ ಶ್ರೀ ಪರಮೇಶ್ವರಪ್ಪನವರ ಹಾಗೂ ಶ್ರೀ ಹಾಲಪ್ಪನವರ ಪ್ರಕರಣಗಳಿಗೆ ಸಂಬಂಧಿಸಿದ ಎರಡೂ ಪ್ರಕರಣಗಳಲ್ಲಿ ಸರ್ಕಾರದ ನಿಲುವನ್ನು ನ್ಯಾಯಾಲಯವು ಪುಷ್ಟೀಕರಿಸಿದಂತಾಗಿದೆ. ನೇಮಕಾತಿ ಆಗುವ ಪೂರ್ವದಲ್ಲಿ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಸಲ್ಲಿಸಿದ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 41(ಎ)ರಡಿಯಲ್ಲಿ ಪರಿಗಣಿಸಲು ಮತ್ತು ಅದರಂತೆ ಸೇವಾ ಸೌಲಭ್ಯವನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ. ಆದ್ದರಿಂದ, ಇಲಾಖೆಯ ಸಂಬಂಧಿಸಿದ ಎಲ್ಲಾ ಸಕ್ಷಮ ಪ್ರಾಧಿಕಾರಿಗಳು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಇಂತಹ ಪ್ರಕರಣಗಳಲ್ಲಿ ಯಾವುದೇ ಕಾರಣಕ್ಕೂ ಶಿಕ್ಷಕರ ಗುತ್ತಿಗೆ ಆಧಾರದ ಮೇಲಿನ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 41(ಎ)ರಡಿಯಲ್ಲಿ ಪರಿಗಣಿಸತಕ್ಕದ್ದಲ್ಲವೆಂದು ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 184 ಪಿಎಂಡಬ್ಲ್ಯೂ 2004 ದಿನಾಂಕ:28–04–2007ರಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಜಲಸಂಪನ್ಮೂಲ ಇಲಾಖೆಯಲ್ಲಿ ಇಂತಹುದೇ ಪ್ರಕರಣವೊಂದರಲ್ಲಿ ಗುತ್ತಿಗ ಆಧಾರದಲ್ಲಿ ಸೇವೆ ಸಲ್ಲಿಸಿ, ಖಾಯಂಗೊಂಡ ಶ್ರೀ ಎಲ್ ಪ್ರಸನ್ನ ಕುಮಾರ್ ಮತ್ತಿತರರು 1990ರ ವಿಶೇಷ ನಿಯಮಗಳ ನಿಯಮ 4ರನ್ವಯ ಗುತ್ತಿಗೆ ಆಧಾರದ ಸೇವೆಯನ್ನು ವೇತನ ನಿಗದಿಗೆ ಪರಿಗಣಿಸಿರುವಂತೆ ತಮಗೂ ಗುತ್ತಿಗೆ ಆಧಾರದ ಸೇವೆಯನ್ನು ವೇತನ ನಿಗದಿಗೆ ಪರಿಗಣಿಸಲು ನಿರ್ದೇಶನ ನೀಡುವಂತೆ ಕೋರಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ

ದಾಖಲಿಸಿದ್ದ ಅರ್ಜಿ ಸಂಖ್ಯೆ:4860-4868/2009ರಲ್ಲಿ ಮಾನ್ಯ ಕೆ.ಎ.ಟಿ.ಯು ದಿನಾಂಕ:05-06-2013ರಂದು ಈ ಕೆಳಕಂಡಂತೆ ತೀರ್ಪು ನೀಡಿದೆ-

*".9. It may be observed that entry into Government service has to be as per the Recruitment Rules and as mentioned by the applicants the method of appointment on contract basis itself was pernicious contract denounced by the Supreme Court and various other Courts as violation of Articles 14 and 16(1) of the Constitution.*

*10. Absorption of such contract employees is only on humanitarian ground that after many years of service as contract employees they should not be driven out of jobs. It is a compassionate step by the Government. Such persons are entitled to the benefits which are available in the Absorption Rules and no more. Since the concerned Rules of Absorption did not provide for fixation of pay on the basis their earlier service, and the benefit given to the teachers in such matters has already been withdrawn by the Amendment of Absorption Rules relating to contract teachers/Lecturers, it cannot be said that there is any discrimination. We do not find any ground to interfere in the endorsement and consequently, we dismiss the applications."*

ಇಂತಹುದೇ ಇನ್ನೊಂದು ಪ್ರಕರಣದಲ್ಲಿ ಶ್ರೀ ಪ್ರಕಾಶ್ ಸಿ. ಪಾಯಣ್ಣವರ್ ಮತ್ತು ಇತರರ ವೇತನ ನಿಯತಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯವನ್ನು ರಿಟ್ ಅರ್ಜಿ ಸಂಖ್ಯೆ: 377-390/2000 ಮತ್ತು ಇತರೆ ಅರ್ಜಿಗಳನ್ವಯ ಸಂಪರ್ಕಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀ ಜಿ. ಹಾಲಪ್ಪ ಇವರ ಪ್ರಕರಣದಲ್ಲಿ ನೀಡಿರುವ ತೀರ್ಪನ್ನೇ ಉಲ್ಲೇಖಿಸಿ ದಿನಾಂಕ:11.03.2005ರಂದು ಈ ಕುರಿತಾದ ಅರ್ಜಿಗಳನ್ನು ವಜಾಗೊಳಿಸಿ ಆದೇಶಿಸಿದೆ. ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ:-

*"6. In view of the facts and circumstances of the cases and in the light of the order passed by the Apex Court on 26th April 2002 in Civil Appeal Nos.525-641/1999(STATE OF KARNATAKA AND OTHERS Vs.G. HALAPPA AND OTHERS), the writ petitions filed by the petitioners are disposed of in terms of the said order and for the reasons stated therein.*

*Further, it is needless to clarify that, if the petitioners have got any grievances they are at liberty to redress the same before the competent authority, as envisaged under mandatory provisions of the Act, if so advised or if it requires."*

ಮೇಲೆ ವಿವರಿಸುವ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಮಾನ್ಯ ಭಾರತ ಸರ್ವೋಚ್ಚನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:525-641 C/w ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ:6456-6606/2000, ಸಿವಿಲ್ ಅಪೀಲು ಸಂಖ್ಯೆ:3491/2000 ಮತ್ತು ಸಿವಿಲ್ ಅಪೀಲು ಸಂಖ್ಯೆ:3747-3748/2000ರಲ್ಲಿನ ದಿನಾಂಕ: 26.04.2002ರ ತೀರ್ಪು ಅಂತಿಮವಾಗಿರುತ್ತದೆ. ಆದ್ದರಿಂದ, The Karnataka Civil Services (Absorption of persons appointed on contract basis in the category of posts of Primary School Teacher, Secondary School Teacher, Government Junior College Lecturers, First Grade College Lecturers, Lecturers in Polytechnics, Lecturers in Government Engineering Colleges, into State Civil Services) (Special) Rules, 1990ರ ನಿಯಮ-4(1)ಕ್ಕೆ ಸರ್ಕಾರದ ಅಧಿಸೂಚನೆ ಸಂಖೆ:ಡಿಪಿಎಆರ್ 12 ಎಸ್‌ಆರ್‌ಇ 97, ದಿನಾಂಕ:08-10-1999ರಲ್ಲಿ ತರಲಾಗಿರುವ ತಿದ್ದುಪಡಿ ನಿಯಮಗಳನ್ನು ಅನುಷ್ಠಾನಗೊಳಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 409 ಡಿಜಿಡಿ 2013 ದಿನಾಂಕ:08-06-2016ರಲ್ಲಿ ಎಲ್ಲಾ ಇಲಾಖಾ ಮುಖ್ಯಸ್ಥರಿಗೂ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 409 ಡಿಜಿಡಿ 2013 (ಭಾಗ-2) ದಿನಾಂಕ:07-12-2017ರಲ್ಲಿ ಮಾರ್ಗಸೂಚಿಗಳನ್ನು ನಿಗದಿಪಡಿಸಿ, ಅದರನ್ವಯ ದಿನಾಂಕ:08-10-1993ರ ತಿದ್ದುಪಡಿ ನಿಯಮಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 409 ಡಿಜಿಡಿ 2013(ಭಾಗ–2) ದಿನಾಂಕ:07.12.2017ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 12 ಎಸ್‌ಆರ್‌ಇ 97, ದಿ:08.10.1999 ರಲ್ಲಿ ತಿದ್ದುಪಡಿ ನಿಯಮಗಳು ಸರಿಯಾಗಿ ಅನುಷ್ಠಾನಗೊಳ್ಳದಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಉಪನ್ಯಾಸಕರ ವೇತನ ಮತ್ತು ಪಿಂಚಣಿಯನ್ನು ಪುನರ್ ನಿಗದಿಗೊಳಿಸಲು ಆದೇಶಿಸಲಾಗಿತ್ತು. ಆದರೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013 (ಭಾಗ–3) ದಿನಾಂಕ: 17.01.2018 ರಲ್ಲಿ ದಿನಾಂಕ: 07.12.2017 ರಲ್ಲಿ ಹೊರಡಿಸಿರುವ ಸರ್ಕಾರದ ಸುತ್ತೋಲೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಆದೇಶಿಸಲಾಗಿರುತ್ತದೆ.

ತಿದ್ದುಪಡಿ ನಿಯಮಗಳನ್ವಯ ವೇತನ ಮತ್ತು ಪಿಂಚಣಿ ಸೌಲಭ್ಯಗಳನ್ನು ಪುನರ್ ನಿಗದಿಪಡಿಸುವುದನ್ನು ಪರಿಶೀಲಿಸಿ, ಈ ಕುರಿತು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ಶಿಕ್ಷಕರ ಸಂಘಟನೆಗಳು ಕೋರಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013 (ಭಾಗ–2) ದಿನಾಂಕ:03.02.2018 ರಲ್ಲಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಂಡಿರುವ ಗುತ್ತಿಗೆ ನೌಕರರ ವೇತನ / ಪಿಂಚಣಿಯನ್ನು ಪುನರ್ ನಿಗದಿಪಡಿಸುವ ಸಂಬಂಧ ಸರ್ಕಾರವು ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಕ. ಟಿ. ಶ್ರೀಕಂಠೇಗೌಡ ರವರ ನೇತೃತ್ವದಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಅಂತಿಮ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿನ ಶಿಫಾರಸ್ಸುಗಳು ಈ ಕೆಳಕಂಡಂತಿದೆ–

**ಸಮಿತಿಯ ಶಿಫಾರಸ್ಸು:–**

1) ಈ ವರದಿಯನ್ನು ಸರ್ಕಾರವು ಸಚಿವ ಸಂಪುಟದ ಮುಂದೆ ತಂದು ಡಿಪಿಎಆರ್ 12 ಎಸ್‌ಆರ್‌ಇ 1997 ದಿನಾಂಕ:08–10–1999ರಲ್ಲಿ ಹೊರಡಿಸಿದ ಸರ್ಕಾರಿ ಅಧಿಸೂಚನೆಯನ್ನು **'ರದ್ದುಪಡಿಸಲು'** ಈ ಸಮಿತಿಯು ಶಿಫಾರಸ್ಸು ಮಾಡಿದೆ. ಈ ಆದೇಶವನ್ನು ರದ್ದುಪಡಿಸಿದರೆ ಸರ್ಕಾರಕ್ಕೆ ಯಾವುದೇ ರೀತಿಯ 'ಆರ್ಥಿಕ ಹೊರೆ' ಉಂಟಾಗುವುದಿಲ್ಲ.
2) ಸದರಿ ಖಾಯಂಗೊಂಡಿರುವ ಗುತ್ತಿಗೆ ಶಿಕ್ಷಕ–ಉಪ್ಯಾಸಕರಿಗೆ **'ಕಾಲಮಿತಿ ಬಡ್ತಿ ಹಾಗೂ ಸ್ಥಗಿತ ವೇತನ ಬಡ್ತಿ'** ಎಂದಿನಂತೆ ಮಂಜೂರು ಮಾಡಲು ಶಿಫಾರಸ್ಸು ಮಾಡಿದೆ.

ಶ್ರೀ ಶ್ರೀಕಂಠೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಈ ಸಮಿತಿಯ ವರದಿಯ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಸೇವಾ ನಿಯಮಗಳು) ಇಲಾಖೆ, ಆರ್ಥಿಕ ಇಲಾಖೆಯ ಮತ್ತು ಕಾನೂನು ಇಲಾಖೆಗಳು ನೀಡಿರುವ ಅಭಿಪ್ರಾಯದಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013(ಭಾಗ–2) ದಿನಾಂಕ:29–11–2023ರಲ್ಲಿ "ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 239 ಎಸ್‌ಇಎಸ್ 88 ದಿನಾಂಕ:19–02–1991ರಲ್ಲಿ ರಚಿಸಲಾದ 1990ರ ವಿಶೇಷ ನಿಯಮಗಳನ್ವಯ ಸರ್ಕಾರಿ ಸೇವೆಯಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಉಪನ್ಯಾಸಕರ/ಶಿಕ್ಷಕರ ವೇತನವನ್ನು ಮತ್ತು ಪಿಂಚಣಿಯನ್ನು ನಿಗದಿಪಡಿಸುವ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 184 ಪಿಎಂಡಬ್ಲ್ಯೂ 2004 ದಿನಾಂಕ:28–04–2007ರಲ್ಲಿ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 409 ಡಿಜಿಡಿ 2013(ಭಾ–2) ದಿನಾಂಕ:07–12–2017ರ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನೇ ಯಥಾವತ್ತಾಗಿ ಜಾರಿ ಮಾಡುವ ಮೂಲಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 12 ಎಸ್‌ಆರ್‌ಇ 97 ದಿನಾಂಕ:08–10–1999ರ ತಿದ್ದುಪಡಿ ನಿಯಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ ಹಾಗೂ ತಿದ್ದುಪಡಿ ನಿಯಮಗಳನುಸಾರ ಖಾಯಂಗೊಂಡ ಶಿಕ್ಷಕರು/ಉಪನ್ಯಾಸಕರ ವೇತನ/ಪಿಂಚಣಿಯನ್ನು ಮರುನಿಗದಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು." ಎಂದು ಆದೇಶ ಹೊರಡಿಸಲಾಗಿದೆ.

ಸದರಿ ಆದೇಶವು ರಾಜ್ಯ ಸರ್ಕಾರವು ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಸಿವಿಲ್ ಅಪೀಲು ಸಂಖ್ಯೆ:525–641 C/w ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ:6456–6606/2000, ಸಿವಿಲ್ ಅಪೀಲು ಸಂಖ್ಯೆ:3491/2000 ಮತ್ತು ಸಿವಿಲ್ ಅಪೀಲು ಸಂಖ್ಯೆ:3747–3748/2000ರಲ್ಲಿನ ದಿನಾಂಕ:26–04–2002ರಲ್ಲಿನ ತೀರ್ಪಿಗೆ ಅನುಗುಣವಾಗಿರುವುದರಿಂದ ಸದರಿ ಆದೇಶವು ಸರ್ಕಾರದ ಅಂತಿಮ ನಿರ್ಣಯವಾಗಿರುತ್ತದೆ.

**ಸಂಖ್ಯೆ: ಇಪಿ 52 ಡಿಜಿಡಬ್ಲ್ಯೂ 2024**

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.